1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ

ಸಿ.ಸಿ ನಂ:21/2022

ಪಿರ್ಯಾದುದಾರರು :                    ಆರೋಪಿ:

ವಿರುದ್ಧ

ಅಬಕಾರಿ ಪೊಲೀಸ್ ಠಾಣೆ

ಸುರೇಶ ಅಲಿಯಾಸ್
ಯಕ್ಕನಹಳ್ಳಿ ಸುರಿ ಅಲಿಯಾಸ್ ಜಾನಿ
ಬಿನ್ ಬಸವರಾಜಪ್ಪ
ವಯಸ್ಸುಃ 45 ವರ್ಷ
ಯಕ್ಕನಹಳ್ಳಿ ಗ್ರಾಮ ಹೊನ್ನಾಳಿ ತಾಲ್ಲೂಕು,
ದಾವಣಗೆರೆ ಜಿಲ್ಲೆ

ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿ ಆರೋಪಿ ಹೇಳಿಕೆ.

| | | |
|---|---|---|
| ಪ್ರಶ್ನೆ 1 | : | ನ್ಯಾಯಾಲಯದಲ್ಲಿ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಲ್ಲವೆ ? |
| ಉತ್ತರ<br>ಆಃ1 | : | |
| ಆಃ2 | | |
| ಪ್ರಶ್ನೆ 2 | : | ಪ್ರಾ.ಸಾ: 1 ಉಮೇಶ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 30.08.2021 ರ ಮಧ್ಯರಾತ್ರಿ 12.00 ರ ಸಮಯದಲ್ಲಿ ಶೌಚಾಲಯ ಹಾಗೂ ಎಂ. ಡಿ ವಿಭಾಗದ ಕಿಟಕಿ ಬಾಗಿಲನ್ನು ಒಡೆದು , 7 ಮೀ ಕಾಪರ್ ಕೆಬಲನ್ನು ಕಳ್ಳತನ ಮಾಡಲಾಗಿತ್ತು . ಸದರಿ ಕೇಬಲ್ ಸರ್ಕಾರದ ಆಸ್ತಿಯಾಗಿತ್ತು. ಅದರ ಅಂದಾಜು ಬೆಲೀ ರೂ 7,000/ ಆಗಿತ್ತು . ನಾನು ಆ ಬಗ್ಗೆ ದೂರನ್ನು ನೀಡಿರುತ್ತೇನೆ. ದೂರನ್ನು ನಿ.ಪಿ 1 ಎಂದು ಗುರುತಿಸಲಾಯಿತು. ದಿನಾಂಕಃ 31.08.2021 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ಮಹಜರ್ ಜರುಗಿಸಿದರು. ಆ ಕಾಲಕ್ಕೆ ಚಾ.ಸಾ 2 ಮತ್ತು 3 ರವರು ಹಾಜರಿದ್ದರು ಸಮಯ 10.00 ರಿಂದ 11.00 ಆಗಿತ್ತು . ಸದರಿ ಸ್ಥಳ ಮಹಜರನ್ನು ನಿ.ಪಿ 2 ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಬಾವಚಿತ್ರ ತೆಗೆದಿರುತ್ತಾರೆ. ಅದರಲ್ಲಿ ಸಾಕ್ಷಿ ತಾನು |

| | | |
|---|---|---|
| | | ಇರುವುದನ್ನು ಗುರುತಿಸಿದ್ದರಿಂದ ನಿ.ಪಿ 3 ಎಂದು ಗುರುತಿಸಲಾಯಿತು. ದಿನಾಂಕಃ 22.10.2021 ರಂದು ಅವರ ಪುನಃ ಹೇಳಿಕೆಯನ್ನು ಪೊಲೀಸರು ಪಡೆದಿರುತ್ತಾರೆ. ಕಳ್ಳತನ ಮಾಡಿದ ನಿಮ್ಮನ್ನು ಕರೆದುಕೊಂಡು ಬಂದು ಅವರಿಗೆ ತೋರಿಸಿ ಅವರ ಕಚೇರಿಯಲ್ಲಿ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಗೆ ಮಾಡಿರು ಕೊಂಡ ಬಗ್ಗೆ ಹೇಳಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. '' ಇದಕ್ಕೆ ನೀವು ಏನು ಹೇಳುತ್ತೀರಿ? |
| ಉತ್ತರ<br>ಆಃ1 | : | |
| ಪ್ರಶ್ನೆ 3 | : | ಪ್ರಾ.ಸಾ: 02 ರಾಜಪ್ಪ ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 31.08.2021 ರಂದು ನನ್ನನ್ನು , ಚಾ.ಸಾ 3 ರವರನ್ನು ಚಾ.ಸಾ 1 ರವರು ಕರೆದು ಕೊಂಡು ಕಳ್ಳತನ ಸಂಬಂಧವಾಗಿ ಮಹಜರ್ ಮಾಡುವುದು ಇರುತ್ತದೆ ಆದ್ದರಿಂದ ಹಾಜರಿರುವಂತೆ ಕೋಳಿಕೊಂಡರು . ನಂತರ ಚಾ.ಸಾ 1 ರವರು ಟೆಲಿಫೋನ್ ಎಕ್ಸ್ ಚೇಂಜ್ ನಲ್ಲಿ ತೋರಿಸಿದ ಸ್ಥಳವನ್ನು ಪೊಲೀಸರು ಬಿಳಗ್ಗೆ 10.00 ರಿಂದ 11.00 ರ ಸಮಯದಲ್ಲಿ ನೋಡಿ ಮಹಜರನ್ನು ಬರೆದಿರುತ್ತಾರೆ. ನನ್ನ ಜೊತೆ ಚಾ.ಸಾ 1 ಮತ್ತು 3 ರವರು ನಿ.ಪಿ 2 ಕ್ಕೆ ಸಹಿ ಮಾಡಿರುತ್ತಾರೆ. ಆ ಕಾಲಕ್ಕೆ ನಿ.ಪಿ 3 ರಂತೆ ಬಾವಚಿತ್ರವನ್ನು ತೆಗೆದಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. '' ಇದಕ್ಕೆ ನೀವು ಏನು ಹೇಳುತ್ತೀರಿ? |
| ಉತ್ತರ<br>ಆಃ1 | : | |
| ಪ್ರಶ್ನೆ 4 | : | ಪ್ರಾ.ಸಾ: 03 ಕೆ. ಹೆಚ್ ಲೋಕೇಶ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 31.08.2021 ರಂದು ನನ್ನನ್ನು , ಚಾ.ಸಾ 2 ರವರನ್ನು ಚಾ.ಸಾ 1 ರವರು ಕರೆದು ಕೊಂಡು ಕಳ್ಳತನ ಸಂಬಂಧವಾಗಿ ಮಹಜರ್ ಮಾಡುವುದು ಇರುತ್ತದೆ ಆದ್ದರಿಂದ ಹಾಜರಿರುವಂತೆ ಕೋಳಿಕೊಂಡರು . ನಂತರ ಚಾ.ಸಾ 1 ರವರು ಟೆಲಿಫೋನ್ ಎಕ್ಸ್ ಚೇಂಜ್ ನಲ್ಲಿ ತೋರಿಸಿದ ಸ್ಥಳವನ್ನು ಪೊಲೀಸರು ಬಿಳಗ್ಗೆ 10.00 ರಿಂದ 11.00 ರ ಸಮಯದಲ್ಲಿ ನೋಡಿ ಮಹಜರನ್ನು ಬರೆದಿರುತ್ತಾರೆ. ನನ್ನ ಜೊತೆ |

| | | |
|---|---|---|
| | | ಚಾ.ಸಾ 1 ಮತ್ತು 3 ರವರು ನಿ.ಪಿ 2ಕ್ಕೆ ಸಹಿ ಮಾಡಿರುತ್ತಾರೆ. ಆ ಕಾಲಕ್ಕೆ ನಿ.ಪಿ 3 ರಂತೆ ಬಾವಚಿತ್ರವನ್ನು ತೆಗೆದಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ? |
| ಉತ್ತರ ಆಃ1 | : | |
| ಪ್ರಶ್ನೆ 5 | : | ಪ್ರಾ.ಸಾ: 04 ಮೂರ್ತಿ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 20.10.2021 ರಂದು ಚನ್ನಗಿರಿಯ ತಾವರೆಕೆರೆಯ ರಸ್ತೆಯ ಬಳಿ ಆರೋಪಿಯಾದ ನಿಮ್ಮನ್ನು ವಿಚಾರಿಸುವ ವೇಳೆಯಲ್ಲಿ ಅಲ್ಲಿದ್ದು , ತಾನು ಗೊಪ್ಪೆನಹಳ್ಳಿ ಟೆಲಿಫೋನ್ ಕಚೇರಿಯಲ್ಲಿ ಕಾಪರ್ ವೈರ್ , ಆ ಊರಿನ ಮನೆಗಳಲ್ಲಿ ಕಿವಿ ಓಲೆ ಹಾಗೂ ಉಂಗುರ ಮತ್ತು 55,000.00 ರೂಗಳನ್ನು ಕಳ್ಳತನ ಮಾಡಿರುವುದಾಗಿ ಹೇದ ಕಾಪರ್ ವೈರನ್ನು ಮಾರಾಟ ಮಾಡಿ ಬಂದ 6,000.00 ರೂ ಪೈಕಿ 4,000/ ಖರ್ಚು ಮಾಡಿರುತ್ತೇನೆ ಎಂದು ಉಳಿದ 2,000.00 ರೂ. ಗಳನ್ನು ಹಾಜರುಪಡಿಸಿರುತ್ತಾನೆ. ಅವುಗಳ ಮುಖಬೆಲೆ 500.00 ರೂ. ಗಳಾಗಿದ್ದವು . ನಂತರ ಕಿವಿ ಓಲೆ ಮತ್ತು ಬಂಗಾರದ ಉಂಗುರಗಳನ್ನು ಕೂಡ ಹಾಜರುಪಡಿಸಿರುತ್ತಾನೆ. ಆ ಸಮಯದಲ್ಲಿ ಆರೋಪಿಯಾದ ನಿಮ್ಮ ಹೊಂಡಾ ಸ್ಪ್ಲೆಂಡರ್ ಬೈಕನ್ನು ವಶಪಡಿಸಿರುತ್ತಾರೆ. ನಂತರ ಆರೋಪಿಯಾದ ನಿಮ್ಮ ಹೆಬ್ಬೆಟ್ಟಿನ ಗುರುತು ಹಾಗೂ ಪೊಲೀಸರ ಸಹಿಗಳನ್ನು ಸದರಿ ಮಹಜರ್ ಗೆ ಪಡೆದಿರುತ್ತಾರೆ. ಆರೋಪಿಯಾದ ನಿಮ್ಮಬಳಿಯಿಂದ ವಶಪಡಿಸಿದ್ದ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಅಮಾನತ್ತು ಪಂಚನಾಮೆ , ಬಾವಚಿತ್ರಗಳನ್ನು ಗುರುತಿಸಿದ್ದರಿಂದ ನಿ.ಪಿ 4 ರಿಂದ 8 ಎಂದು ಗುರುತಿಸಲಾಯಿತು. ಅದೇ ದಿನ ನೀವು ಗೊಪ್ಪೆನಹಳ್ಳಿ ಬಿ. ಎಸ್ ಎನ. ಎಲ್ ಕಚೇರಿಯಲ್ಲಿ ತೋರಿಸಿದ ಸ್ಥಳದ ಮಹಜರ್ ನ್ನು 10.30 ರಿಂದ 11.15 ರವರೆಗೆ ಬರೆದುಕೊಂಡು ನನ್ನ , ಚಾ.ಸಾ 5 ರವರ ಸಹಿ ಪಡೆದಿರುತ್ತಾರೆ. ಸಾಕ್ಷಿಯು ಗುರುತಿಸಿದರ ದಾಖಲೆಯನ್ನು ನಿ.ಪಿ 9 ಎಂದು ಹ ಹಾಗೂ ಸಾಕ್ಷಿಯು ಒಂದು ಭಾವಚಿತ್ರದಲ್ಲಿ ತಾನು ರುವುದನ್ನು ನೋಡಿ ಗುರುತಿಸಿದ್ದರಿಂದ ಸದರಿ ಬಾವಚಿತ್ರವನ್ನು ನಿ.ಪಿ 10 ಎಂದು ಗುರುತಿಸಿರುತ್ತಾರೆ. ಎಂದು ತಮ್ಮ ಸಾಕ್ಷ್ಯದಲ್ಲಿ |

| | | |
|---|---|---|
| | | ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ ? |
| ಉತ್ತರ<br>ಆಃ1 | : | |
| ಪ್ರಶ್ನೆ 6 | | ಪ್ರಾ.ಸಾ: 05 ದೇವರಾಜ ಎಂ. ಸಿ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 20.10.2021 ರಂದು ಚನ್ನಗಿರಿಯ ತಾವರೆಕೆರೆಯ ರಸ್ತೆಯ ಬಳಿ ಆರೋಪಿಯಾದ ನಿಮ್ಮನ್ನು ವಿಚಾರಿಸುವ ವೇಳೆಯಲ್ಲಿ ಅಲ್ಲಿದ್ದು , ತಾನು ಗೊಪ್ಪೇನಹಳ್ಳಿ ಟೆಲಿಫೋನ್ ಕಚೇರಿಯಲ್ಲಿ ಕಾಪರ್ ವೈರ್ , ಆ ಊರಿನ ಮನೆಗಳಲ್ಲಿ ಕಿವಿ ಓಲೆ ಹಾಗೂ ಉಂಗುರ ಮತ್ತು 55,000.00 ರೂಗಳನ್ನು ಕಳ್ಳತನ ಮಾಡಿರುವುದಾಗಿ ಹೇದ ಕಾಪರ್ ವೈರನ್ನು ಮಾರಾಟ ಮಾಡಿ ಬಂದ 6,000.00 ರೂ ಪೈಕಿ 4,000/ ಖರ್ಚು ಮಾಡಿರುತ್ತೇನೆ ಎಂದು ಉಳಿದ 2,000.00 ರೂ. ಗಳನ್ನು ಹಾಜರುಪಡಿಸಿರುತ್ತಾನೆ. ಅವುಗಳ ಮುಖಬೆಲೆ 500.00 ರೂ. ಗಳಾಗಿದ್ದವು . ನಂತರ ಕಿವಿ ಓಲೆ ಮತ್ತು ಬಂಗಾರದ ಉಂಗುರಗಳನ್ನು ಕೂಡ ಹಾಜರುಪಡಿಸಿರುತ್ತಾನೆ. ಆ ಸಮಯದಲ್ಲಿ ಆರೋಪಿಯಾದ ನಿಮ್ಮ ಹೊಂಡಾ ಸ್ಪ್ಲೆಂಡರ್ ಬೈಕನ್ನು ವಶಪಡಿಸಿರುತ್ತಾರೆ. ನಂತರ ಆರೋಪಿಯಾದ ನಿಮ್ಮ ಹೆಬ್ಬೆಟ್ಟಿನ ಗುರುತು ಹಾಗೂ ಪೊಲೀಸರ ಸಹಿಗಳನ್ನು ಸದರಿ ಮಹಜರ್ ಗೆ ಪಡೆದಿರುತ್ತಾರೆ. ಆರೋಪಿಯಾದ ನಿಮ್ಮಬಳಿಯಿಂದ ವಶಪಡಿಸಿದ್ದ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಅಮಾನತ್ತು ಪಂಚನಾಮೆ , ಬಾವಚಿತ್ರಗಳನ್ನು ಗುರುತಿಸಿದ್ದರಿಂದ ನಿ.ಪಿ 4 ರಿಂದ 8 ಎಂದು ಗುರುತಿಸಲಾಯಿತು. ಅದೇ ದಿನ ನೀವು ಗೊಪ್ಪೇನಹಳ್ಳಿ ಬಿ. ಎಸ್ ಎನ. ಎಲ್ ಕಚೇರಿಯಲ್ಲಿ ತೋರಿಸಿದ ಸ್ಥಳದ ಮಹಜರ್ ನ್ನು 10.30 ರಿಂದ 11.45 ರವರೆಗೆ ಬರೆದುಕೊಂಡು ನನ್ನ , ಚಾ.ಸಾ 4 ರವರ ಸಹಿ ಪಡೆದಿರುತ್ತಾರೆ. ಸಾಕ್ಷಿಯು ನಿ.ಪಿ 9 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 9 ಬಿ ಎಂದು ಗುರುತಿಸಿದ್ದು . ಸಾಕ್ಷಿಯು ನಿ.ಪಿ 10 ರ ಒಂದು ಬಾವಚಿತ್ರದಲ್ಲಿ ತಾನು ಇರವುದನ್ನು ಗುರುತಿಸಿದ್ದು ಸದರಿ ಬಾವಚಿತ್ರದಲ್ಲಿ ಆರೋಪಿಯಾದ ನಿಮ್ಮನ್ನು ಗುರುತಿಸಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ ? |

| | | |
|---|---|---|
| ಉತ್ತರ | : | |
| ಪ್ರಶ್ನೆ 7 | : | ಫ್ರಾ.ಸಾ: 06 ಚಂದ್ರಶೇಖರ್ ಕೆ. ಎನ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 20.10.2021 ರಂದು ನಾನು ಬೆಳಗ್ಗೆ 7.30 ರ ಸಮಯದಲ್ಲಿ ಚಾಸಾ 6 ಮತ್ತು 7 ರವರ ಜೊತೆಗೆ ವಿಶೇಷ ಬೆಳಗಿನ ಗಸ್ತಿಗೆ ಹೋದಾಗ ಹೊನ್ನೆಬಾಗಿ ಕಡೆಯಿಂದ ಒಂದು ಮೊಟಾರ್ ಬೈಕ್ ಸಂ. ಕೆಎ 17 ಇ ಬಿ 4087 ನ್ನು ಚಲಾಯಿಸಿಕೊಂಡು ಒಬ್ಬ ಅಸಾಮಿ ಚನ್ನಗಿರಿ ಕಡೆಗೆ ಬರುತ್ತಿದ್ದವನನ್ನು ತಪಾಸಣೆ ಒಳಪಡಿಸಿದಾಗ ಆತ ತನ್ನ ಹೆಸರು ಮತ್ತು ವಿಳಾಸವನ್ನು ಸರಿಯಾಗಿ ನೀಡದೆ ಬೈಕ್ ನ್ನು ಬಿಟ್ಟು ಪರಾರಿಯಾಗಲು ಪ್ರಯತ್ನಿಸಿದ. ಆಗ ಅವರು ಮತ್ತು ಅವರ ಸಿಬ್ಬಂದಿಯವರು ಹಿಡಿದುಕೊಂಡು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಸುರೇಶ ಯಾನೆ ಎಕ್ಕನಹಳ್ಳಿ ಸೂರಿ ಯಾನೆ ಜಾನಿ ಬಿನ್ ಬಸವರಾಜಪ್ಪ, ಎಕ್ಕನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು ಎಂದು ತಿಳಿಸಿರುತ್ತಾನೆ. ಆತ ಚಲಾಯಿಸುತ್ತಿದ್ದ ವಾಹನದ ದಾಖಲೆ ಕೇಳಲಾಗಿ ಆತನ ಸರಿಯಾದ ಮಾಹಿತಿ ನೀಡಲಿಲ್ಲ. ಆತನನ್ನು ಕುಲಂಕುಷವಾಗಿ ವಿಚಾರಣೆ ಮಾಡಲಾಗಿ ದಿಃ 19.09.2021 ರಂದು ರಾತ್ರಿ 1.30 ರ ಸಮಯದಲ್ಲಿ ಚನ್ನಗಿರಿ ತಾಲ್ಲೂಕಿನ ಕಬ್ಬಳ ಗ್ರಾಮದ ಒಂದು ಮನೆಯ ಮುಂದೆನಿಲ್ಲಿಸಿದ್ದ ಮೊಟಾರ್ ಬೈಕ್ ನ್ನು ಕೀಲಿಯನ್ನು ಡೈರೆಕ್ಟ್ ಮಾಡಿ ಕಳ್ಳತನಮಾಡಿಕೊಂಡು ತನ್ನ ಬಳಿ ಇಟ್ಟುಕೊಂಡಿದ್ದ. ನಂತರ ಹೆಚ್ಚಿನ ವಿಚಾರಣೆ ಮಾಡಲಾಗಿ ದಿಃ 30.08.2021 ರಂದು ಮದ್ಯರಾತ್ರಿ ಸುಮಾರು 12.00 ರ ಸಮಯದಲ್ಲಿ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ ಗ್ರಾಮದ ಹೈಸ್ಕೂಲ್ ಪಕ್ಕ ಇರುವ ಬಿ ಎಸ್ ಎನ್ ಎಲ್ ಕಚೇರಿಯ ಕಿಟಕಿ ಗಾಜು ಹೊಡೆದು ಒಳ ಪ್ರವೇಶ ಮಾಡಿ ಅದರಲ್ಲಿದ್ದ 7 ಮೀ ಕಾಪರ್ ಕೇಬಲ್ ನ್ನು ಕಳ್ಳತನಮಾಡಿರುವುದಾಗಿ ಮತ್ತು ಅದನ್ನು ಹಳೇ ಪ್ಲಾಸ್ಟೀಕ್ ಕಬ್ಬಿಣ ವಸ್ತು ಖರೀದಿಸುವವರ ಕಡೆ 6000/ ರೂಗಳಿಗೆ ಮಾರಾಟ ಮಾಡಿರುವುದಾಗಿ ಹೇಳಿದ. ನಂತರ ದಿಃ22.09.2021 ರಂದು ಮದ್ಯರಾತ್ರಿ 1.30 ರಸಮಯದಲ್ಲ್ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ ಗ್ರಾಮದ ಬೀಗ ಹಾಕಿದ ಮನೆಯಲ್ಲಿ ಬೀಗ ಮುರಿದು ಒಳಗೆ ಪ್ರವೇಶ ಮಾಡಿ ಗಾಡ್ರೇಜ್ ಬೀರುವಿನ ಬೀಗ ಮುರಿದು ಅದರಲ್ಲಿದ್ದ ಸುಮಾರು 5 ಗ್ರಾಂ ತೂಕದ ಒಂದು ಜೊತೆ ಬಂಗಾದ ಕಿವಿ ಓಲೆ, ಸುಮಾರು 5 ಗ್ರಾಂ ತೂಕದ ಒಂದು ಬಂಗಾರದ ಉಂಗುರ ಹಾಗೂ |

| | | |
|---|---|---|
| | | 55000/ ನಗದು ಹಣವನ್ನು ಕಳ್ಳತನಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ. ಸದರಿಯವುಗಳನ್ನು ಮಾರಾಟ ಮಾಡುವ ಇಚ್ಚೆಯಿಂದ ತನ್ನಬಳಿ ಇಟ್ಟುಕೊಂಡಿರುತ್ತಾರೆ ಎಂದು ಹೇಳಿದ. ಕಾಪರ್ ವೈರ್ ಮಾರಾಟ ಮಾಡಿ ಬಂದ ಹಣದಲ್ಲಿ 4,000/ ರೂಗಳನ್ನು ಖರ್ಚುಮಾಡಿರುತ್ತೇನೆ ಉಳಿದ 2,000/ ಹಣವನ್ನು ತನ್ನ ಪ್ಯಾಂಟಿನ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ಹೇಳಿದ. ಮುಂದುವರೆದು 55,000/ ರೂ ನಲ್ಲಿ 50,000/ ಗಳನ್ನು ಖರ್ಚುಮಾಡಿ 5,000/ ರೂಗಳನ್ನು ತನ್ನ ಬಳಿ ಇಟ್ಟುಕೊಂಡಿರುವುದಾಗಿ ಹೇಳಿದ. ಆತನ ಹೇಳಿಕೆಯ ಆದಾರದ ಮೇಲೆ ಚನ್ನಗಿರಿ ಪೊಲೀಸ್ ಠಾಣಾ ಗುನ್ನೆ ಸಂ. 348/2021 ಕಲಂ 457,380 ಐ ಪಿಸಿ ರಡಿಯಲ್ಲಿ ಹಾಗೂ ಅದೇ ಠಾಣೆಯ ಅಪರಾದ ಸಂ.311/2021 ರಡಿಯಲ್ಲಿ ಕಲಂ 457,380 ಐ ಪಿಸಿ ರಂತೆ ಪ್ರಕರಣಗಳು ದಾಖಲಾಗಿ ತನಿಖೆಯಲ್ಲಿ ಇರುವುದು ಗೊತ್ತಾಯಿತು. ಅದೇ ರೀತಿ ಆರೋಪಿಯಾದ ನೀವು ಉಪಯೋಗಿಸುತ್ತಿದ್ದ ಮೋಟಾರ್ ಬೈಕ್ ಕಳ್ಳತನದ ವಿಷಯವಾಗಿ ಬಸವಪಟ್ಟಣ ಪೊಲೀಸ್ ಠಾಣಾ ಗುನ್ನೆ ಸಂ.127/2021 ತನಿಖೆಯಲ್ಲಿರುವುದು ತಿಳಿದುಬಂತು. ನಂತರ ಆರೋಪಿಯಾದ ನಿಮ್ಮನ್ನು ಬೆಳಗ್ಗೆ 8.00 ಗಂಟೆಗೆ ಠಾಣೆಯಲ್ಲಿ ದಸ್ತಗಿರಿ ನಿಯಮಾವಳಿ ಜರುಗಿಸಿ ದಸ್ತಗಿರಿ ಮಾಡಿರುತ್ತಾರೆ. ಆ ಕಾಲಕ್ಕೆ ನೀವು ಕೊಟ್ಟ ಸ್ವಇಚ್ಚಾ ಹೇಳಿಕೆಯನ್ನು ಪಡೆದಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ? |
| ಉತ್ತರ ಆಃ1 | : | |
| ಪ್ರಶ್ನೆ 8 | : | ಪ್ರಾ.ಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ನಿಮ್ಮನ್ನು ವಶಕ್ಕೆ ಪಡೆದ ತಾವರೆಕೆರೆಯ ಕ್ರಾಸ್ ಹತ್ತಿರ ಸ್ಥಳ ಹಾಗೂ ಅಮಾನತ್ತು ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಯು ನಿಪಿ 4 ರಿಂದ 8 ರಂತೆ ಇರುವ ಅಮಾನತ್ತು ಪಂಚನಾಮೆ ಹಾಗೂ ಆಕಾಲಕ್ಕೆ ತೆಗೆದ ಬಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ 4 ನ್ನು ಬೆಳಗ್ಗೆ 8.00 ರಿಂದ 9.00 ರವರೆಗೆ ಮಾಡಲಾಗಿರುತ್ತದೆ. ಆ ಕಾಲಕ್ಕೆ ನಿಮ್ಮ ಕಡೆಯಿಂದ ಒಟ್ಟು |

| | | |
|---|---|---|
| | | 7,000/ ರೂ ಕಳ್ಳತನದ ಹಣ, ಮೊಟಾರ್ ಬೈಕ್ ಮತ್ತು ಬಂಗಾರದ 2 ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ ? |
| ಉತ್ತರ ಆಃ1 | | |
| ಪ್ರಶ್ನೆ 9 | : | ಪ್ರಾ.ಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದೇ ದಿನ ಬೆಳಗ್ಗೆ 10.30 ರಿಂದ 11.156 ರವರೆಗೆ ಆರೋಪಿ ತೋರಿಸಿದ ಗೊಪ್ಪೇನಹಳ್ಳಿಯ ಬಿ ಎಸ್ ಎನ್ ಎಲ್ ಕಚೇರಿಯ ಮುಂಭಾಗದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಮಹಜರ್ ಮಾಡಿರುತ್ತೇನೆ. ನಿಪಿ 9 ರಂತೆ ಇರುವ ದಾಖಲೆಯಲ್ಲಿನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 9 ಸಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಬಾವಚಿತ್ರವನ್ನು ತೆಗೆಸಿರುತ್ತೇನೆ. ಅದನ್ನು ಈಗಾಗಲೇ ನಿಪಿ 10 ಎಂದು ಗುರುತಿಸಲಾಗಿದ್ದು ಸಹಿಯನ್ನು ನಿಪಿ 10 ಎ ಎಂದು ಗುರುತಿಸಲಾಯಿತು. ಈ ಬಗ್ಗೆ ವಿವರವಾದ ವರದಿಯನ್ನು ಚಾಸಾ 12 ರವರಿಗೆ ದಾಖಲೆಗಳ ಸಮೇತ ಸಲ್ಲಿಸಿರುತ್ತೇನೆ. ನಾನು ದಿಃ20.10.2021 ರಂದು ದಾಖಲಮಾಡಿಕೊಂಡ ಆರೋಪಿಯ ಸ್ವಇಚ್ಛಾ ಹೇಳಿಕೆಯ ಪ್ರತಿಯನ್ನು ನೋಡುತ್ತಿದ್ದ ಅದರ ಮೂಲ ಪ್ರತಿ ಸಿಆರ್ ಸಂ.348/2021 ರಲ್ಲಿ ಇರುತ್ತದೆ. ಸಾಕ್ಷಿಯು ಸ್ವಇಚ್ಛಾ ಹೇಳಿಕೆಯ ಭಾಗಗಳನ್ನು ಗುರುತಿಸಿ ನುಡಿದ ಕಾರಣ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸ್ವಇಚ್ಛಾ ಹೇಳಿಕೆಯ ನಕಲನ್ನು ನಿಪಿ 11 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ದೃಶ್ಯ ಸಮ್ಮೇಳನದ ಮೂಲಕ ಹಾಜರಿರುವ ಆರೋಪಿಯಾದ ನಿಮ್ಮನ್ನು ನೋಡಿ ಗುರುತಿಸಿರುತ್ತಾರೆ. ಮು ಮಾ ನ್ನು ನೋಡಿದರೆ ಗುರುತಿಸುತ್ತಾರೆ. ಸಾಕ್ಷಿಯು ಮು. ಮಾ. 5 ರಿಂದ 8 ರಲ್ಲಿರುವ ಮು. ಮಾಲನ್ನು ನೋಡಿ ಗುರುತಿಸಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ ? |
| ಉತ್ತರ | | |

| | | |
|---|---|---|
| ಆಃ1 | | |
| ಪ್ರಶ್ನೆ 10 | : | ಪ್ರಾ.ಸಾ: 07 ರುದ್ರೇಶ್ . ಎಂ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 20 10 2021 ರಲ್ಲಿ ಚಾಸಾ 11 ರವರು ಮತ್ತು ಚಾಸಾ 6 ರವರು ಕಳ್ಳತನ ಪ್ರಕರಣ ಚನ್ನಗಿರಿ ಟೌನ್ ಅಕ್ಕಪಕ್ಕದಲ್ಲಿ ಹೆಚ್ಚುತ್ತಿರುವುದರಿಂದ ಅವರನ್ನು ಕರೆದುಕೊಂಡು ತ್ಯಾವರೆಕೆರೆ ಕ್ರಾಸ್ ಬಳಿ ಗಸ್ತಿಗೆ ಹೋದೆವು . ಸದರಿ ಸಮಯದಲ್ಲಿ ಹೊನ್ನೆಬಾಗಿ ಗ್ರಾಮದ ಕಡೆಯಿಂದ ಒಬ್ಬ ಆಸಾಮಿ ಚನ್ನಗಿರಿ ಟೌನ್ ಕಡೆಗೆ ಬೈಕಿನಲ್ಲಿ ಬರುತ್ತಿದ್ದ ಆಸಾಮಿ ಪೊಲೀಸ್ರವಾಹನವನ್ನು ನೋಡಿ ಬೈಕ್ ನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಲು ಪ್ರಯತ್ನಪಟ್ಟನು. ನಾವು ಅನುಮಾನಗೊಂಡು ಸದರಿ ಆರೋಪಿಯನ್ನು ಹಿಡಿದುಕೊಂಡೆವು . ಅವರನ್ನು ವಿಚಾರಿಸಲಾಗಿ ಆತನ ಹೆಸರು ಸುರೇಶ ಯಾನೆ ಎಗ್ಗನಹಳ್ಳಿ ಸುರೇಶ ಆಲಿಯಾಸ್ ಜಾನಿ , ತಂದೆ ಬಸವರಾಜಪ್ಪ , ಯಕ್ಕನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು ಎಂದು ತಿಳಿಸಿರುತ್ತಾನೆ . ಚಾಸಾ 12 ರವರು ಆತನ ಬೈಕ್ ನ ದಾಖಲೆಗಳನ್ನು ಕೇಳಲಾಗಿ ಕಬ್ಬಳ ಗ್ರಾಮದ ಮನೆ ಮುಂದೆ ನಿಂತಿದ್ದ ವಾಹನವನ್ನು ಕಳ್ಳತನ ಮಾಡಿಕೊಂಡು ಬಂದಿರುವುದಾಗಿ ತಿಳಿಸಿರುತ್ತಾನೆ . ಸದರಿ ಬೈಕ್ ನ ಸಂಃ ಕೆಎ 17 ಇಬಿ 4087 ಆಗಿತ್ತು . ಸದರಿ ಬೈಕ್ ನ ಬಗ್ಗೆ ವಿಚಾರಿಸಲಾಗಿ ಬಸವಪಟ್ಟಣ ಪೊಲೀಸ್ ಠಾಣೆಯಲ್ಲಿ ಸಿಆರ್ ಸಂಃ 127/2021 ರಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದು ತಿಳಿಸಿರುತ್ತಾರೆ .<br><br>ಮುಂದುವರೆದು ವಿಚಾರಿಸಲಾಗಿ ದಿನಾಂಕಃ 30 08 2021 ಗೊಪ್ಪೇನಹಳ್ಳಿ ಗ್ರಾಮದ ಹೈಸ್ಕೂಲ್‌ನ ಪಕ್ಕ ಬಿ.ಎಸ್.ಎನ್.ಎಲ್ ಕಛೇರಿಯ ಕಿಟಕಿ ಗಾಜನ್ನು ಹೊಡೆದು ಒಳನುಗ್ಗಿ 7 ಮೀಟರ್ ಉದ್ದದ ತಾಮ್ರದ ತಂತಿಯನ್ನು ಕತ್ತರಿಸಿರುತ್ತೇನೆ ಎಂದು ತಿಳಿಸಿರುತ್ತಾನೆ . ಸದರಿ ತಾಮ್ರದ ತಂತಿಯು ಎಲ್ಲಿ ಎಂದು ವಿಚಾರಿಸಿದಾಗ ಅಪರಿಚಿತ ಗುಜರಿ ವ್ಯಾಪಾರಿಗೆ ರೂಃ 6,000/ ಗಳಿಗೆ ಮಾರಾಟ ಮಾಡಿರುತ್ತೇನೆ ಎಂದು ತಿಳಿಸಿರುತ್ತಾನೆ. ಸದರಿ ವಿಚಾರವಾಗಿ ಸಿ.ಆರ್ ಸಂಃ 311/2021 ರಲ್ಲಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿರುತ್ತದೆ ಎಂಬುದು ತಿಳಿದು ಬಂದಿರುತ್ತದೆ .<br><br>ದಿಃ 22 09 2021 ರಂದು ಗೊಪ್ಪೇನಹಳ್ಳಿ ಗ್ರಾಮದ ಮನೆಯಲ್ಲಿ ರಾತ್ರಿ ಸಮಯದಲ್ಲಿ |

ಬೀಗ ಹೊಡೆದು ಒಂದು ಜೊತೆ ಕಿವಿಯೋಲೆ, ಉಂಗುರ ಮತ್ತು ರೂಃ55,000/ ನಗದನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾನೆ. ಸದರಿ ಪ್ರಕರಣದ ಮಾಲುಗಳ ಬಗ್ಗೆ ವಿಚಾರಿಸಲಾಗಿ ಸದರಿ ರೂಃ 55,000/ ಗಳಲ್ಲಿ ರೂಃ 50,000/ ಖರ್ಚು ಮಾಡಿ ನನ್ನ ಬಳಿ ಒಂದು ಜೊತೆ ಕಿವಿಯೊಲೆ, ಉಂಗುರ ಮತ್ತು ಕೇವಲ ರೂಃ 5,000/ ಉಳಿದಿದೆ ಎಂದು ಅದನ್ನು ನನ್ನ ಪ್ಯಾಂಟಿನ ಜೇಬಿನಲ್ಲಿ ಇದೆ ಅದನ್ನು ನಾನು ಈಗ ಮಾರಾಟ ಮಾಡಲು ಚನ್ನಗಿರಿಗೆ ಹೋಗುತ್ತಿದ್ದೇನೆ ಎಂದು ತಿಳಿಸಿರುತ್ತಾರೆ. ಸದರಿ ವಿಚಾರವಾಗಿ ಸಿ.ಆರ್ ಸಂಃ 348/2021 ರಲ್ಲಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿರುತ್ತದೆ ಎಂಬುದು ತಿಳಿದು ಬಂದಿರುತ್ತದೆ .

ನಂತರ ಪಂಚರಾದ ಚಾಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಅವರ ಸಮ್ಮುಖದಲ್ಲಿ ಬೆಳಗ್ಗೆ 8.00 ರಿಂದ 9.00 ಗಂಟೆಯವರೆಗೆ ಅಮಾನತ್ತು ಪಂಚನಾಮೆಯನ್ನು ಮಾಡಿಕೊಂಡಿರುತ್ತೇವೆ . ಸದರಿ ಪಂಚನಾಮೆಯ ಸಮಯದಲ್ಲಿ ರೂಃ 2,000/ ಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ಅದನ್ನು ಈಗ ಸಾಕ್ಷಿಗೆ ತೋರಿಸಲಾಗಿ ಅದನ್ನು ಸಾಕ್ಷಿಯು ಗುರುತಿಸಿರುತ್ತಾರೆ ಅದನ್ನು ಈಗಾಗಲೇ ಎಂ.ಓ 1 ಎಂದು ಗುರುತಿಸಲಾಗಿದೆ .

ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಅದನ್ನು ಗುರುತಿಸಿರುತ್ತಾರೆ. ಈಗಾಗಲೇ ಸದರಿ ಸ್ಥಳ ಹಾಗೂ ಅಮಾನತ್ತು ಪಂಚನಾಮೆಯನ್ನು ನಿ ಪಿ 4 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4 ಎ ಎಂದು ಗುರುತಿಸಲಾಯಿತು .

ಸದರಿ ಪ್ರಕರಣದಲ್ಲಿ ಬೈಕ್ ನ್ನು ಅಮಾನತ್ತು ಮಾಡಿ ಪೋಟೋವನ್ನು ತೆಗೆಯಲಾಯಿತು. ಅದನ್ನು ಸಾಕ್ಷಿಯು ಗುರುತಿಸಿರುತ್ತಾರೆ . ಅವುಗಳನ್ನು ಈಗಾಗಲೇ ಸದರಿ 4 ಪೋಟೋಗಳನ್ನು ನಿ ಪಿ 5 ರಿಂದ ನಿ ಪಿ 8 ಎಂದು ಗುರುತಿಸಲಾಗಿರುತ್ತದೆ . ಅಮಾನತ್ತು ಪಡಿಸಿಕೊಂಡ ಇತರೆ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ವಿಡಿಯೋ ಕಾನ್ಫ್ ರೆನ್ಸ್ ಮೂಲಕ ತೋರಿಸಲಾಗಿ ಸಾಕ್ಷಿಯು ಗುರುತಿಸಿರುತ್ತಾರೆ . ಅದೇ ದಿನ ಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮದಲ್ಲಿ ಬೆಳಗ್ಗೆ 9.30

| | | |
|---|---|---|
| | | ರಿಂದ 10.15 ರವರೆಗೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇವೆ . ಆರೋಪಿಯು ಪಿರ್ಯಾದಿರವರ ಮನೆಯನ್ನು ತೋರಿಸಿ ನಾನು ಇದೇ ಸ್ಥಳದಲ್ಲಿಯೇ ಕಳ್ಳತನ ಮಾಡಿದ್ದು ಎಂದು ತಿಳಿಸಿರುತ್ತಾರೆ .<br>ಸಾಕ್ಷಿಗೆ ನಿಮಗೆ ತೋರಿಸಿದ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ಗುರುತಿಸಿರುತ್ತಾರೆ. ಈಗಾಗಲೇ ಸದರಿ ಸ್ಥಳ ಪಂಚನಾಮೆಯನ್ನು ನಿ ಪಿ 9 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ ನಿ ಪಿ 9 ಡಿ ಎಂದು ಗುರುತಿಸಲಾಯಿತು .<br>ಸದರಿ ಸಮಯದಲ್ಲಿ ಫೋಟೋವನ್ನು ತೆಗೆಸಿರುತ್ತೇವೆ. ಅದನ್ನು ಸಾಕ್ಷಿಯು ಗುರುತಿಸಿರುತ್ತಾರೆ ಸದರಿ ಫೋಟೋವನ್ನು ನಿ ಪಿ 10 ಎಂದು ಹಾಗೂ ಅದರಲ್ಲಿ ಸಹಿಯನ್ನು ನಿ ಪಿ 10 ಎ ಈಗಾಗಲೇ ಗುರುತಿಸಲಾಗಿದೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ ? |
| ಉತ್ತರ<br>ಆಃ1 | : | |
| ಪ್ರಶ್ನೆ 11 | : | ಪ್ರಾ.ಸಾ: 08 ಹರೀಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 30.08.2021 ರಂದು ಅವರು ಕಛೇರಿಗೆ ಹಿಂದಿರುಗಿದಾಗ ಹಿಂದಿನ ರಾತ್ರಿ ಸುಮಾರು 12.00 ಗಂಟೆಯ ಸಮಯದಲ್ಲಿ ಯಾರೋ ಕಳ್ಳರು ಕಛೇರಿಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಕಛೇರಿಯ ಒಳಗೆ ಪ್ರವೇಶ ಮಾಡಿ 7 ಮೀಟರ್ ಉದ್ದದ ಕಾಪರ್ ಕೇಬಲ್ ನ್ನು ಕಳ್ಳತನ ಮಾಡಿ ಹೋಗಿರುತ್ತಾರೆ ಎಂದು ಚಾಸಾ 1 ರವರು ಅವರಿಗೆ ತಿಳಿಸಿರುತ್ತಾರೆ. ಚಾಸಾ 1 ರವರು ನಂತರ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ . ಈ ವಿಚಾರ ವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ . ಪೊಲೀಸರು ನಿಮ್ಮನ್ನು ದಿಃ 20 10 2021 ರಂದು ಕಛೇರಿಗೆ ಕರೆದುಕೊಂಡು ಬಂದಿರುತ್ತಾರೆ . ನಂತರ ನಿಮ್ಮನ್ನು ಪೊಲೀಸರು ನನಗೆ ತೋರಿಸಿ ಇವನೇ ಕಳ್ಳತನ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ . ಆರೋಪಿಯಾದ ನಿಮ್ಮ ಹೆಸರು ಸುರೇಶ್ ಎಂದು ತಿಳಿಸಿರುತ್ತಾರೆ . ಜೆಟ್ಸಿ ಮೀಟ್ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ಈಗ ತೋರಿಸಿದ್ದು ಸಾಕ್ಷಿಯು ಅವರನ್ನು ಗುರುತಿಸಿರುತ್ತಾರೆ . ಸ್ಥಳ ಪಂಚನಾಮೆಯನ್ನು ನಿಮ್ಮನ್ನು |

| | | |
|---|---|---|
| | | ಕರೆದು ತಂದು ಮಾಡಿರುತ್ತಾರೆ .ಸದರಿ ವಿಚಾರವಾಗಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ . ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ ? |
| ಉತ್ತರ ಆಃ1 | : | |
| ಪ್ರಶ್ನೆ 12 | | ಪ್ರಾ.ಸಾ: 09 ಬಸವರಾಜಪ್ಪ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 30 08 2021 ರಂದು ನಾನು ಚಾಸಾ 8 ರವರ ಜೊತೆ ಕಛೇರಿಗೆ ಹಿಂದಿರುಗಿದಾಗ ಹಿಂದಿನ ರಾತ್ರಿ ಸುಮಾರು 12.00 ಗಂಟೆಯ ಸಮಯದಲ್ಲಿ ಯಾರೋ ಕಳ್ಳರು ಕಛೇರಿಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಕಛೇರಿಯ ಒಳಗೆ ಪ್ರವೇಶ ಮಾಡಿ 7 ಮೀಟರ್ ಉದ್ದದ ಕಾಪರ್ ಕೇಬಲ್ ನ್ನು ಕಳ್ಳತನ ಮಾಡಿ ಹೋಗಿರುತ್ತಾರೆ ಎಂದು ಚಾಸಾ 1 ರವರಿಗೆ ತಿಳಿಸಿರುತ್ತೇನೆ . ಚಾಸಾ 1 ರವರು ನಂತರ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ . ಈ ವಿಚಾರ ವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ . ಪೊಲೀಸರು ನಿಮ್ಮನ್ನು ದಿಃ 20.10.2021 ರಂದು ಕಛೇರಿಗೆ ಕರೆದುಕೊಂಡು ಬಂದಿರುತ್ತಾರೆ . ನಂತರ ನಿಮ್ಮನ್ನು ಪೊಲೀಸರು ಅವರಿಗೆ ತೋರಿಸಿ ಇವನೇ ಕಳ್ಳತನ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ . ನಿಮ್ಮ ಹೆಸರು ಸುರೇಶ್ ಎಂದು ತಿಳಿಸಿರುತ್ತಾರೆ . ಜೆಟ್ಸಿ ಮೀಟ್ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ಈಗ ತೋರಿಸಿದ್ದು ಸಾಕ್ಷಿಯು ಅವರನ್ನು ಗುರುತಿಸಿರುತ್ತಾರೆ . ಸ್ಥಳ ಪಂಚನಾಮೆಯನ್ನು ನಿಮ್ಮನ್ನು ಕರೆದು ತಂದು ಮಾಡಿರುತ್ತಾರೆ .ಸದರಿ ವಿಚಾರವಾಗಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ ? |
| ಉತ್ತರ ಆಃ1 | : | |
| ಪ್ರಶ್ನೆ 13 | : | ಪ್ರಾ.ಸಾ: 10 ಬಿ. ಎಸ್ ರೂಪ್ಲಿಬಾಯಿ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 30 08 2021 ರಂದು ಸಂಜೆ 7.15 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ, ಠಾಣೆ ಗುನ್ನೆ ಸಂಃ 311/2021 ರಲ್ಲಿ ನೊಂದಾಯಿಸಿ ಕೊಂಡಿರುತ್ತಾರೆ. ಸದರಿ ದೂರನ್ನು ಈಗಾಗಲೇ |

ನಿ ಪಿ 1 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1 ಬಿ ಎಂದು ಗುರುತಿಸಲಾಯಿತು . ದಿಃ 31 08 2021 ರಂದು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ . ಸದರಿ ದಾಖಲೆಯನ್ನು ಸಾಕ್ಷಿಯು ಗುರುತಿಸಿರುವುದರಿಂದ ನಿ ಪಿ 12 ಎಂದು ಗುರುತಿಸಲಾಯಿತು . ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 12 ಎ ಎಂದು ಗುರುತಿಸಲಾಯಿತು .ದಿಃ 31 08 2021 ರಂದು ಗೊಪ್ಪೇನಹಳ್ಳಿ ಗ್ರಾಮದ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಗೆಗ 10.00 ಗಂಟೆಯಿಂದ 11.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿರುತ್ತದೆ . ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2 ಡಿ ಎಂದು ಗುರುತಿಸಲಾಯಿತು .ಸದರಿ ಸಮಯದಲ್ಲಿ ಪೋಟೋವನ್ನು ತೆಗೆಸಿರುತ್ತಾರೆ. ಸದರಿ ಪೋಟೋವನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿರುತ್ತದೆ . ದಿಃ 31 08 2021 ರಂದು ಪಂಚರಾದ ಚಾಸಾ 2 ಮತ್ತು 3 ರವರಿಗೆ ನೋಟಿಸನ್ನು ಜಾರಿ ಮಾಡಿರುತ್ತಾರೆ . ಸದರಿ ನೋಟಿಸನ್ನು ಸಾಕ್ಷಿಯು ಗುರುತಿಸಿದ್ದುದರಿಂದ ಅವುಗಳನ್ನು ನಿ ಪಿ 13 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 13 ಎ ಎಂದು ಗುರುತಿಸಲಾಯಿತು . ನಂತರ ಚಾಸಾ 8 ಮತ್ತು 9 ರವರ ಹೇಳಿಕೆಗಳನ್ನು ಪಡೆದಿರುತ್ತಾರ. ದಿಃ 20 10 2021 ರಂದು ಚಾಸಾ 11 ರವರು ಮಾಲು , ಸ್ಥಳ ಮತ್ತು ಅಮಾನತ್ತು ಪಂಚನಾಮೆ ಹಾಗೂ ಆರೋಪಿ ತೋರಿಸಿದ ಸ್ಥಳ ಪಂಚನಾಮೆ , ಪಂಚನಾಮೆಗಳನ್ನು ಮಾಡುವಾಗ ತೆಗೆದ ಪೋಟೋಗಳು, ವರದಿ ಮತ್ತು ನಿಮ್ಮ ಸ್ವಇಚ್ಛೆ ಹೇಳಿಕೆಯನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ಈಗಾಗಲೇ ನಿಶಾನೆಗೊಳಿಸಲಾಗಿದೆ. ನಂತರ ಮಾಲುಪಟ್ಟಿ ಸಂಖ್ಯೆಃ 150/2021 ರಲ್ಲಿ ನೊಂದಾಯಿಸಿಕೊಂಡಿರುತ್ತಾರೆ. ಚಾಸಾ 8 ಮತ್ತು 9 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಚಾಸಾ 6 ಮತ್ತು 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ಪ್ರಕರಣ ಸಂಖ್ಯೆಃ 348/2021 ರ ಮೂಲ ದಾಖಲಾತಿಗಳನ್ನು ಸಿಆರ್ ಸಂಃ 311/2021 ರಲ್ಲಿ ಅಳವಡಿಸಿಕೊಂಡಿರುತ್ತಾರೆ.. ಮಾಲುಪಟ್ಟಿಯಲ್ಲಿ ಇರುವ ಮಾಲು ಸಂಖ್ಯೆಃ

| | | |
|---|---|---|
| | | 4 ಯನ್ನು ಈಗಾಗಲೇ ಎಂ.ಓ 1 ಎಂದು ಗುರುತಿಸಿದ್ದು , ಅದನ್ನು ನೋಡಿದರೆ ಗುರುತಿಸುತ್ತಾರೆ. ಠಾಣಾ ಗುನ್ನೆ ಸಂಃ 348/2021 ರಲ್ಲಿ ಸದರಿ ಮಾಲನ್ನು ಈಗಾಗಲೇ ಗುರುತಿಸಲಾಗಿದೆ . ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ನಿಮ್ಮನ್ನು ನೋಡಿ ಗುರುತಿಸಿರುತ್ತಾರೆ . ದಿಃ 12 11 2021 ರಂದು ಆರೋಪಿಯಾದ ನಿಮ್ಮ ವಿರುದ್ದ ಆರೋಪ ಸಾಬೀತಾದುದರಿಂದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.'' ಇದಕ್ಕೆ ನೀವು ಏನು ಹೇಳುತ್ತೀರಿ ? |
| ಉತ್ತರ<br>ಆಃ1 | : | |
| ಪ್ರಶ್ನೆ 14 | : | ಈ ಕೇಸಿನ ಬಗ್ಗೆ ನಿಮಗೆ ಏನಾದರೂ ? |
| ಉತ್ತರ<br>ಆಃ1 | : | |
| ಆಃ2 | | |
| ಪ್ರಶ್ನೆ 15 | : | ನಿಮ್ಮ ಪರವಾಗಿ ಸಾಕ್ಷಿ ಮಾಡುವಿರಾ ? |
| ಉತ್ತರ<br>ಆಃ1 | : | |

( ಆರೋಪಿತರ ಹೇಳಿಕೆಗಳನ್ನು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರಗಳನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

ದಿನಾಂಕ: 15.12.2022

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚನ್ನಗಿರಿ.

**<u>ಆರೋಪಿತರ ಸಹಿಗಳು :-</u>**

ಆರೋಪಿ ಃ1